ಇರುವುದಾಗಿ ತಿಳಿಸತೊಡಗಿದ.

ಮನೆಗೆ ಮರಳಿದ ಗುರ್ಲಿಂಗ ಕನ್ನಡ ಸಂಘದ ಕಾನೂನುಬಾಹಿರ ಚುನಾವಣೆಯನ್ನು ಪತ್ರಿಕಾಗೋಷ್ಠಿಯಲ್ಲಿ ಸಾಬೀತುಪಡಿಸಲು ಬೇಕಾದ ದಾಖಲೆಗಳನ್ನು ಜೋಡಿಸತೊಡಗಿದ. ಸಂಘದ ಬೈಲಾದಲ್ಲಿ 'ಬಸವಾಪುರದ ನಗರ ನಿವಾಸಿಗಳು ಮಾತ್ರ ಕನ್ನಡ ಸಂಘದ ಸದಸ್ಯರಾಗಬಹುದು' ಎಂದು ಸ್ಪಷ್ಟವಾಗಿ ಬರೆದಿತ್ತು. ಮತದಾರರ ಪಟ್ಟಿಯಲ್ಲಿ ಗುರ್ಲಿಂಗನ ವಿಳಾಸ ಸೂಡೂರಿನದೇ ಇತ್ತು. ಈ ಪ್ರಕಾರ ತನ್ನ ಚುನಾವಣೆಯ ನಾಮಪತ್ರವನ್ನು ತಿರಸ್ಕರಿಸಿದ್ದು ಸರಿಯಾಗಿಯೇ ಇದೆಯಲ್ಲ, ನಾನೇ ತಪ್ಪಾಗಿ ಕಾನೂನುಬಾಹಿರ ಎನ್ನುತ್ತಿದ್ದೇನೆಯೇ ಎಂದು ಗೊಂದಲಕ್ಕೊಳಗಾದ. ಮತದಾರರ ಪಟ್ಟಿಯಲ್ಲಿ ಬರೀ ಬಸವಾಪುರದ ವಿಳಾಸಗಳೇ ಇವೆಯೇ ಎಂದು ನೋಡತೊಡಗಿದ ಗುರ್ಲಿಂಗನಿಗೆ ದಿಗ್ಭ್ರಮೆಯಾಗುವ ವಿಷಯ ಎದುರಾಯಿತು.

ಬೈಲಾ ಪ್ರಕಾರ ಸಂಘದ ಸದಸ್ಯನಲ್ಲ ಎಂದು ಗುರ್ಲಿಂಗನ ನಾಮಪತ್ರವನ್ನು ಅನರ್ಹಗೊಳಿಸಿದ್ದ ಚುನಾವಣಾಧಿಕಾರಿ ಕುಮಾರಪ್ಪನೇ ಬಿಡುಗಡೆಗೊಳಿಸಿದ್ದ ಮತದಾರರ ಪಟ್ಟಿಯಲ್ಲಿ ಈಗ ಬೆಂಗಳೂರು, ಮೈಸೂರುಗಳಲ್ಲಿ ನೆಲೆಸಿದ್ದ ಸದಸ್ಯರ ಹೆಸರುಗಳು ಅವರ ಅದೇ ವಿಳಾಸದಲ್ಲಿದ್ದವು. ಇದನ್ನು ನೋಡಿ ಕೊನೆಗೆ ತನ್ನ ಹೆಸರಿದ್ದ ಕಡೆ ಕಣ್ಣು ನೆಟ್ಟ ಗುರ್ಲಿಂಗನಿಗೆ ಏನೋ ಹೊಳೆದು ಮತದಾರರ ಪಟ್ಟಿಯಲ್ಲಿ ನಾನು ಇದ್ದೇನೆ ಎಂದಾಗ ನನಗೂ ಓಟಿನ ಹಕ್ಕಿದೆ, ಓಟಿನ ಹಕ್ಕಿರುವ ಮತದಾರರೆಲ್ಲ ಚುನಾವಣೆಗೆ ನಿಲ್ಲಬಹುದು ಎಂದರ್ಥವಲ್ಲವೇ ಎಂದು ನಕ್ಕುಬಿಟ್ಟ.

ಗುರ್ಲಿಂಗ ನಕ್ಕಿದ್ದೇನೋ ಹೌದು. ಆದರೆ ಈ ವಿಚಾರ ನಾಳೆ ಬಹಿರಂಗಗೊಳ್ಳುತ್ತಿದ್ದಂತೆ ಕನ್ನಡ ಸಂಘ ಹೇಗೋ ಗಳಿಸಿದ ಕೀರ್ತಿ ಗೌರವ ಅಳಿಸಿಹೋಗುತ್ತದೆ ಎಂದು ಮನಸ್ಸಿಗೆ ಬರುತ್ತಿದ್ದಂತೆ ವಿಹ್ವಲಗೊಂಡ. ಕುವೆಂಪು ಇಲ್ಲಿಗೆ ಬಂದಿದ್ದರಂತೆ, ಬೇಂದ್ರೆ, ಕಾರಂತರೆಲ್ಲ ಬಂದು ಭಾಷಣ ಮಾಡಿದ್ದರಂತೆ. ಆಗ ಕನ್ನಡ ಸಂಘ ತುಂಬಿ ತುಳುಕಿ ರಸ್ತೆಯಲ್ಲೂ ಜನ ನಿಂತು ಅವರ ಭಾಷಣ ಕೇಳುತ್ತಿದ್ದರಂತೆ. ಹೊರಗಿನ ಜನರಿಗೆ ಈಗಲೂ ಸಂಘದ ಬಗ್ಗೆ ವಿಚಿತ್ರ ಗೌರವ, ಪ್ರೀತಿಯಿದೆ. ಪುಸ್ತಕ ಬಹುಮಾನಕ್ಕೆ ರಾಜ್ಯಾದ್ಯಂತ ಸಾವಿರಾರು ಪುಸ್ತಕಗಳು ಬರುತ್ತವೆ. ಚೇಂಬರಿನ ತಿರುಗುವ ಕುರ್ಚಿಯಲ್ಲಿ ಕುಳಿತ ರುದ್ರಮುನಿ ಪ್ರಶಸ್ತಿ ಅರಸಿ ದಿನವೂ ಅಂಚೆಯಲ್ಲಿ ಬರುವ ಪುಸ್ತಕಪ್ರವಾಹವನ್ನು ನೋಡಿ ಓಟು ಕೇಳಲು ಬರುವ ಥರಾವರಿ ಪುಢಾರಿಗಳನ್ನು ನೋಡಿದಂತೆ ತುಟಿಯಂಚಲ್ಲೇ ನಗುತ್ತಿದ್ದುದೇನೋ ಹೌದು. ಆದರೂ ಅದರಲ್ಲಿ ಎಷ್ಟು ಒಳ್ಳೆಯ ಪುಸ್ತಕಗಳನ್ನು ತಾನು ಓದಿಲ್ಲ. ಈಗೀಗ ಸಾಹಿತಿಗಳು ಎಂದರೆ ಎಲ್ಲರೂ ಮೂಗು ಮುರಿಯುತ್ತಾರೆ. ಸತ್ಯ ನುಡಿವ ಸಾಹಿತಿಗಳನ್ನೂ ಪತ್ರಿಕೆಗಳು ಜೋಕರ್‌ಗಳಂತೆ ಬಿಂಬಿಸುತ್ತವೆ. ಇದನ್ನು ಬಹಿರಂಗ ಪಡಿಸಿದರೆ ಸಾಹಿತ್ಯಕ್ಷೇತ್ರದ ಬಗ್ಗೆ ಜನರಿಗಿರುವ ಗೌರವವೇ ಕಡಿಮೆಯಾಗಿಬಿಡಬಹುದು.

ನಾನಾದರೂ ಇನ್ನೊಮ್ಮೆ ಚುನಾವಣೆಗೆ ಯಾಕೆ ನಿಲ್ಲಬೇಕಿತ್ತು. ತಾನೂ ರುದ್ರಮುನಿಯ ಜಾತಿಯವನೇ ತಾನೇ? ತಾನೂ ಅಧಿಕಾರದಾಸೆಗೆ ಬಲಿಬಿದ್ದೆನೇ? ಗುರ್ಲಿಂಗ ದೊಡ್ಡ ಉಭಯಸಂಕಟದಲ್ಲಿ ತೊಳಲಾಡತೊಡಗಿದ. ಮೊದಲೇ ಜ್ವರದಲ್ಲಿ ಬಳಲುತ್ತಿದ್ದವನು ನಿಧಾನಕ್ಕೆ ನಿದ್ರೆಗೆ ಜಾರಿದ.

ಬೆಳಿಗ್ಗೆ ಪತ್ರಿಕಾಗೋಷ್ಠಿಗೆ ಪತ್ರಿಕಾಭವನದ ತುಂಬ ಪೇಪರಿನವರು, ಟಿವಿಯವರು ನೆರೆದಿದ್ದರು. ಜ್ವರದಿಂದ ಬಳಲುತ್ತಿದ್ದ ಗುರ್ಲಿಂಗನಿಗೆ ಮಾತನಾಡಲು ಸಾಧ್ಯವಾಗದೆ ತಿಪ್ಪಣ್ಣನೇ ಕನ್ನಡಸಂಘದ ಚುನಾವಣೆ ಹೇಗೆ ಕಾನೂನುಬಾಹಿರ ಮತ್ತು ನಗೆಪಾಟಲಿನ ವಿಚಾರವೆಂದು ಎಲ್ಲಾ ದಾಖಲೆಗಳನ್ನು ಪ್ರದರ್ಶಿಸುತ್ತ ಎಳೆಎಳೆಯಾಗಿ ವಿವರಿಸಿದ. ಕುವೆಂಪು, ಬೇಂದ್ರೆಯಂಥವರು ಬಂದು ಹೋದಂತಹ ಕನ್ನಡ ಸಂಘವನ್ನು ರುದ್ರಮುನಿಯಂತವರು ಹೇಗೆ ಒಂದು ಜಾತಿಯ ಸಂಘವಾಗಿ ಮಾಡಿಬಿಟ್ಟಿದ್ದಾರೆ, ಇದನ್ನು ಎಲ್ಲರೂ ಪ್ರತಿಭಟಿಸಬೇಕು ಎಂದು ಭಾಷಣ ಬಿಗಿದ.

ಪತ್ರಿಕಾಗೋಷ್ಠಿ ಒಂದೆರೆಡು ಚಾನಲ್ಲುಗಳಲ್ಲಿ ನೇರಪ್ರಸಾರವಾಗಿ ಬಸವಾಪುರದ ಕನ್ನಡಸಂಘದ ಕಾನೂನುಬಾಹಿರ ಚುನಾವಣೆಯನ್ನು ವಿರೋಧಿಸಿ ನಾಡಿನ ಹಿರಿಯ ಸಾಹಿತಿಗಳು ಟಿವಿಗಳಿಗೆ ಹೇಳಿಕೆಯನ್ನು ಕೊಡತೊಡಗಿದರು. ನಾಡನ್ನು ಆಳುವ ರಾಜಕಾರಣಿಗಳಿಗೆ ಬುದ್ಧಿ ಹೇಳಬೇಕಾದ ಸ್ಥಾನದಲ್ಲಿರುವ ಸಾಹಿತ್ಯಸಂಸ್ಥೆಗಳೇ ನೈತಿಕ ಅಧಃಪತನಕ್ಕೊಳಗಾಗುತ್ತಿರುವುದು ಕಳವಳಕಾರಿ ಸಂಗತಿ ಎಂದು ಯುವ ಸಾಹಿತಿಗಳು ಫೇಸ್‌ಬುಕ್ಕಿನಲ್ಲಿ